# ನಾಗರೀಕರು ಮತ್ತು ಮೂಲಭೂತ ಕರ್ತವ್ಯಗಳು

## ನಮ್ಮ ಸಂವಿಧಾನದ ಪ್ರಮುಖ ಲಕ್ಷಣ



"ಕರ್ತವ್ಯದ ಉತ್ತಮ ನಿಭಾವಣೆಯೇ ಹಕ್ಕು"

ಮಹಾತ್ಮ ಗಾಂಧಿ

ನಮ್ಮ ನಾಗರೀಕರು ಮತ್ತು ಮೂಲಭೂತ ಕರ್ತವ್ಯಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲು ಭಾರತ ಸರ್ಕಾರ ದೇಶದ ಎಲ್ಲ ನಾಗರೀಕರನ್ನು ತಲುಪುತ್ತಿದೆ (26 ನವೆಂಬರ್ 2019- 26 ನವೆಂಬರ್ 2020).

ಪ್ರಮುಖ ಉದ್ದೇಶಗಳು

- ಸಂವಿಧಾನ ಹಾಗೂ ಅದರ ಮೌಲ್ಯಗಳು ಮತ್ತು ತತ್ವಗಳ ನಿಜವಾದ ಪಾಲಕರು ಭಾರತದ ಜನತೆ ಎಂದು ಅವರಿಗೆ ಮತ್ತೆ ಮನದಟ್ಟುಮಾಡುವುದು.
- ಎಲ್ಲಾ ನಾಗರೀಕರಿಗೆ, ಸಹ ನಾಗರೀಕರು ಮತ್ತು ದೇಶದ ಕುರಿತು ತಮ್ಮ ಕರ್ತವ್ಯಗಳ ಬಗ್ಗೆ ನೆನಪಿಸುವುದು.
- ರಾಷ್ಟ್ರೀಯತೆಯ ಬಗ್ಗೆ ಹೆಮ್ಮೆ ಪಡುವಂತೆ ನಾಗರಿಕರನ್ನು ಪ್ರೋತ್ಸಾಹಿಸುವುದು.
- ರಾಷ್ಟ್ರೀಯತೆಯ ಬಗ್ಗೆ ಹೆಮ್ಮೆ ಪಡುವಂತೆ ನಾಗರಿಕರನ್ನು ಪ್ರೋತ್ಸಾಹಿಸುವುದು.

# ಮೂಲಭೂತ ಕರ್ತವ್ಯಗಳು - ಮಹತ್ವ ಮತ್ತು ಸೇರ್ಪಡೆ

"ನಾನು ನನ್ನ ಕರ್ತವ್ಯಗಳನ್ನು ನನ್ನ ತಾಯಿಯ ಮಡಿಲಲ್ಲಿ ಕಲಿತಿದ್ದೇನೆ. ಅವಳು ಅಶಿಕ್ಷಿತ ಹಳ್ಳಿ ಮಹಿಳೆಯಾಗಿದ್ದಳು. ಅವಳು ನನ್ನ ಧರ್ಮವನ್ನು ತಿಳಿದಿದ್ದಳು. ಹೀಗೆ ನನ್ನ ಬಾಲ್ಯದಿಂದಲೇ ನಮ್ಮ ಧರ್ಮ ಏನೆಂದು ಕಲಿಯುತ್ತೇವೆ ಮತ್ತು ಅದನ್ನು ಅನುಸರಿಸಲು ಪ್ರಯತ್ನಿಸಿದಾಗ ನಮ್ಮ ಹಕ್ಕುಗಳು ತಮ್ಮನ್ನು ತಾವೇ ನೋಡಿಕೊಳ್ಳುತ್ತವೆ ... ಕರ್ತವ್ಯದ ನಿರ್ವಹಣೆಯೇ ನಮ್ಮ ಹಕ್ಕನ್ನು ಭದ್ರಪಡಿಸುವುದೆ ಇದರ ಸೊಗಸು. ಕರ್ತವ್ಯದಿಂದ ಹಕ್ಕುಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಇದೇ ರೀತಿ ಸತ್ಯಾಗ್ರಹವು ಜನಿಸಿದ್ದು. ಏಕೆಂದರೆ ನನ್ನ ಕರ್ತವ್ಯ ಏನೆಂದು ನಿರ್ಧರಿಸಲು ನಾನು ಯಾವಾಗಲೂ ಪ್ರಯತ್ನಿಸುತ್ತಿದ್ದೆ. "

1947 ರ ಜೂನ್ 28 ರಂದು ದೆಹಲಿಯಲ್ಲಿ ನಡೆದ ಪ್ರಾರ್ಥನಾ ಸಭೆಯಲ್ಲಿ ಮೂಲಭೂತ ಕರ್ತವ್ಯಗಳ ಮಹತ್ವದ ಬಗ್ಗೆ ಮಹಾತ್ಮ ಗಾಂಧಿಯವರು ಹೇಳಿದ್ದು ಹೀಗೆ:

ನಮ್ಮ ಸಂವಿಧಾನದಲ್ಲಿ 11 ಮೂಲಭೂತ ಕರ್ತವ್ಯಗಳನ್ನು ಸೇರಿಸುವುದರ ಹಿಂದಿನ ಪ್ರಮುಖ ಉದ್ದೇಶವೇನೆಂದರೆ, ನಾಗರಿಕರು ಅನುಭವಿಸುವ ಸಮಗ್ರ ಹಕ್ಕುಗಳಿಗೆ ಬದಲಾಗಿ ಅವರ ಜವಾಬ್ದಾರಿಯನ್ನು ಒತ್ತಿಹೇಳುವುದು.

**ಮೂಲಭೂತ ಕರ್ತವ್ಯಗಳು ಗೌರವ, ಹೆಮ್ಮೆ, ಸಹಿಷ್ಣುತೆ, ಶಾಂತಿ, ಪ್ರಗತಿ ಮತ್ತು ಸಾಮರಸ್ಯದಂತಹ ಪ್ರಮುಖ ಮೌಲ್ಯಗಳ ಮೇಲೆ ಕೇಂದ್ರೀಕರಿಸಿವೆ.**

1976 ರಲ್ಲಿ ತಂದ 42 ನೇ ಸಂವಿಧಾನ ತಿದ್ದುಪಡಿ ಕಾಯ್ದೆಯಿಂದ ಮೂಲಭೂತ ಕರ್ತವ್ಯಗಳು ರಾಷ್ಟ್ರಕ್ಕೆ ನಾಗರಿಕರಿಂದ ಮೂಲಭೂತ, ನೈತಿಕ ಮತ್ತು ಕಡ್ಡಾಯ ಕರ್ತವ್ಯಗಳನ್ನು ಸೂಚಿಸುತ್ತವೆ.

**ನಾಗರಿಕರು ತಮ್ಮ ಮೂಲಭೂತ ಹಕ್ಕುಗಳನ್ನು ಚಲಾಯಿಸುವಾಗ ತಮ್ಮ ಕರ್ತವ್ಯಗಳನ್ನು ಕಡೆಗಣಿಸುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಮೂಲಭೂತ ಕರ್ತವ್ಯಗಳನ್ನು ಸೇರಿಸಲು ರಚಿಸಲಾದ ಶಿಫಾರಸ್ಸು ಸಮಿತಿಯು ಅಭಿಪ್ರಾಯಪಟ್ಟಿತು.**

ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ೧೧ ನೇ ಮೂಲಭೂತ ಕರ್ತವ್ಯವನ್ನು ಸಂವಿಧಾನಕ್ಕೆ ೮೬ ನೇ ತಿದ್ದುಪಡಿ ಕಾಯ್ದೆ ೨೦೦೨ ರ ಮೂಲಕ ಸೇರಿಸಲಾಗಿದೆ.

ಯುಎಸ್ಎಸ್ಆರ್, ಜಪಾನ್ ಮತ್ತು ಚೀನಾದ ಸಂವಿಧಾನಗಳಿಂದ ಮೂಲಭೂತ ಕರ್ತವ್ಯಗಳ ಬಗ್ಗೆ ಸ್ಫೂರ್ತಿ ಪಡೆಯಲಾಗಿದೆ.

ನಮ್ಮ ಮೂಲಭೂತ ಕರ್ತವ್ಯಗಳು ಭಾರತೀಯ ಜೀವನ ವಿಧಾನವನ್ನು ಉತ್ತೇಜಿಸಲು ಅವಿಭಾಜ್ಯ ಕರ್ತವ್ಯಗಳ ಕ್ರೋಡೀಕರಣವಾಗಿದೆ. ಅವು ಸಮಾಜದ ಬಗ್ಗೆ ಶಿಸ್ತು ಮತ್ತು ಬದ್ಧತೆಯ ಭಾವವನ್ನು ಉತ್ತೇಜಿಸುತ್ತವೆ.

ಮೂಲಭೂತ ಕರ್ತವ್ಯಗಳು ಪ್ರತಿಯೊಬ್ಬ ನಾಗರಿಕನಿಗೂ ನಿರಂತರ ಜ್ಞಾಪನೆಯಾಗಿ ಕಾರ್ಯನಿರ್ವಹಿಸಲು ಇವೆ. ಸಂವಿಧಾನವು ಅವರಿಗೆ ಕೆಲವು ಮೂಲಭೂತ ಹಕ್ಕುಗಳನ್ನು ನಿರ್ದಿಷ್ಟವಾಗಿ ನೀಡಿದ್ದರೂ, ನಾಗರಿಕರು ಪ್ರಜಾಪ್ರಭುತ್ವದ ನಡವಳಿಕೆ ಮತ್ತು ಪ್ರಜಾಪ್ರಭುತ್ವದ ವರ್ತನೆಯ ಕೆಲವು ಮೂಲಭೂತ ನಿಯಮಗಳನ್ನು ಅನುಸರಿಸಬೇಕು. ಏಕೆಂದರೆ ಹಕ್ಕುಗಳು ಮತ್ತು ಕರ್ತವ್ಯಗಳು ಪರಸ್ಪರ ಸಂಬಂಧಿಗಳಾಗಿವೆ.

"ಪ್ರಜಾಪ್ರಭುತ್ವವು ಸರ್ಕಾರದ ಒಂದು ರೂಪ ಮಾತ್ರವಲ್ಲ. ಇದು ಮೂಲಭೂತವಾಗಿ ನಮ್ಮ ಸಹ ನಾಗರೀಕರ ಬಗೆಗಿನ ಗೌರವ ಮತ್ತು ಪೂಜ್ಯ ಮನೋಭಾವವಾಗಿದೆ"

ಡಾ.ಬಿ.ಆರ್. ಅಂಬೇಡ್ಕರ್

"ಪ್ರತಿಯೊಬ್ಬ ಭಾರತೀಯನು ತಾನು ರಜಪೂತ, ಸಿಖ್ ಅಥವಾ ಜಾಟ್ ಎಂಬುದನ್ನು ಮರೆಯಬೇಕು. ತಾನೊಬ್ಬ ಭಾರತೀಯ ಎಂಬುದನ್ನು ನೆನಪಿಟ್ಟುಕೊಳ್ಳಬೇಕು ಮತ್ತು ಅವನ ದೇಶದಲ್ಲಿ ಅವನಿಗೆ ಎಲ್ಲ ಹಕ್ಕುಗಳಿವೆ ಹಾಗೆಯೇ ಕೆಲವು ಕರ್ತವ್ಯಗಳೂ ಇವೆ ".

-ಸರ್ದಾರ್ ವಲ್ಲಭಭಾಯಿ ಪಟೇಲ್

ನಾಗರಿಕರು ಮತ್ತು ಮೂಲಭೂತ ಕರ್ತವ್ಯಗಳು ಸಕ್ರಿಯ ಭಾಗವಹಿಸುವಿಕೆಯ ಮೂಲಕ ಮಾತ್ರ ನಮ್ಮ ರಾಷ್ಟ್ರೀಯ ಗುರಿಗಳನ್ನು ಸಾಧಿಸಲು ಸಹಾಯ ಮಾಡುತ್ತವೆ

ಅಕ್ಟೋಬರ್ 1999 ರಲ್ಲಿ, ನ್ಯಾಯಮೂರ್ತಿ ವರ್ಮಾ ನೇತೃತ್ವದ ಸಮಿತಿಯು 'ದೇಶದ ನಾಗರಿಕರಿಗೆ ಮೂಲಭೂತ ಕರ್ತವ್ಯಗಳನ್ನು ಬೋಧಿಸುವ ಸಲಹೆಗಳು' ಕುರಿತು ವರದಿಯನ್ನು ಸಲ್ಲಿಸಿತು.

# ನಾಗರಿಕರ ಕರ್ತವ್ಯಗಳ ಬಗ್ಗೆ ಜಾಗೃತರಾಗಿ

- ಭಾರತ ಸಂವಿಧಾನದ ಮುನ್ನುಡಿಯನ್ನು ಓದಿ, ಆನ್‌ಲೈನ್ ಪ್ರತಿಜ್ಞೆಗೆ ಸಹಿ ಮಾಡಿ ಮತ್ತು MyGov.in ನಲ್ಲಿ ತ್ವರಿತ ಪ್ರಮಾಣಪತ್ರವನ್ನು ಪಡೆಯಿರಿ.
- MyGov.in ನಲ್ಲಿ ಆನ್‌ಲೈನ್ ಸಂವಿಧಾನ ದಿನದ ರಸಪ್ರಶ್ನೆ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ.
- www.doj.gov.in ನಿಂದ ಪೋಸ್ಟರ್‌ಗಳು, ಕರಪತ್ರ ಮತ್ತು ಇತರ ಸಾಮಗ್ರಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಿ.

"ನಿಷ್ಠ ಒಂದು ನಿರ್ಣಯವನ್ನು ಕೈಗೊಂಡು ನಿಮ್ಮ ಕರ್ತವ್ಯಗಳ ಬಗ್ಗೆ ಮತ್ತು ರಾಷ್ಟ್ರದ ಬಗೆಗಿನ ನಿಮ್ಮ ಬಾಧ್ಯತೆಗಳ ಬಗ್ಗೆ ಯೋಚಿಸುವಂತೆ ನಾನು ನಿಮ್ಮನ್ನು ಕೋರುತ್ತೇನೆ. ಕರ್ತವ್ಯದ ಹಾದಿಯಲ್ಲಿ ಸಾಗುವಾಗ, 130 ಕೋಟಿ ಪ್ರಯತ್ನಗಳು ಮತ್ತು 130 ಕೋಟಿ ನಿರ್ಣಯಗಳ ಬಲವು ದೇಶಕ್ಕೆ ತುಂಬಾ ಸಹಾಯ ಮಾಡುತ್ತದೆ. "

ನರೇಂದ್ರ ಮೋದಿ
ಪ್ರಧಾನಿ
2019ರ ಸ್ವಚ್ಛ ಭಾರತ ದಿನದಂದು

@DoJ_India ಮತ್ತು @MyGov ನಲ್ಲಿ ನಮ್ಮನ್ನು ಅನುಸರಿಸಿ. Join #Itsmyduty

http://legislative.gov.in/constitution-of-india
ದಲ್ಲಿ ಭಾರತದ ಸಂವಿಧಾನ ಮತ್ತು ಮೂಲಭೂತ ಕರ್ತವ್ಯಗಳ ಪೂರ್ಣ ಪಠ್ಯವನ್ನು ನೋಡಿ.

न्याय विभाग
Department of Justice
भारत सरकार
Government of India
सत्यमेव जयते

# ಸಂವಿಧಾನದಲ್ಲಿ ಪ್ರತಿಪಾದಿಸಲಾದ ಹನ್ನೊಂದು ಕರ್ತವ್ಯಗಳು

## (ಭಾಗ IV-ಎ, ವಿಧಿ 51 ಎ)



- ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗೆ ಬದ್ಧವಾಗಿರುವುದು
- ಸ್ವಾತಂತ್ರ್ಯ ಹೋರಾಟದ ಆದರ್ಶಗಳನ್ನು ಪಾಲಿಸುವುದು.
- ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಸಮಗ್ರತೆಯನ್ನು ಎತ್ತಿಹಿಡಿಯುವುದು.
- ದೇಶವನ್ನು ರಕ್ಷಿಸಿಕೊಳ್ಳುವುದು ಮತ್ತು ದೇಶ ಸೇವೆಯನ್ನು ಮಾಡುವುದು.
- ಸಾಮರಸ್ಯ ಮತ್ತು ಸೋದರತ್ವವನ್ನು ಉತ್ತೇಜಿಸುವುದು.
- ಸಂಯೋಜಿತ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಸಂರಕ್ಷಿಸುವುದು
- ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಮತ್ತು ಸುಧಾರಿಸುವುದು
- ವೈಜ್ಞಾನಿಕ ಮನೋಭಾವ, ಮಾನವತಾವಾದ ಇತ್ಯಾದಿಗಳನ್ನು ಅಭಿವೃದ್ಧಿಪಡಿಸುವುದು.
- ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು ಮತ್ತು ಹಿಂಸಾಚಾರವನ್ನು ತಪ್ಪಿಸುವುದು.
- ಶ್ರೇಷ್ಠತೆಗಾಗಿ ಶ್ರಮಿಸುವುದು.
- ಶಿಕ್ಷಣಕ್ಕಾಗಿ ಅವಕಾಶಗಳನ್ನು ಒದಗಿಸುವುದು.

ನಮ್ಮ ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳ ಸೇರ್ಪಡೆಯು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ 29 (1) ನೇ ವಿಧಿಯೊಂದಿಗೆ ಜೋಡಿಸಲ್ಪಟ್ಟಿದೆ.

"ನಾವು ಜಾಗತೀಕ ಪೌರತ್ವದ ಕರ್ತವ್ಯವನ್ನು ನಿಭಾಯಿಸಿದಾಗ ಮಾತ್ರ ಬದುಕುವ ಹಕ್ಕು ನಮಗೆ ಸಿಗುತ್ತದೆ. ಈ ಒಂದು ಮೂಲಭೂತ ಹೇಳಿಕೆಯಿಂದ, ಬಹುಶಃ ಪುರುಷ ಮತ್ತು ಮಹಿಳೆಯರ ಕರ್ತವ್ಯಗಳನ್ನು ಸುಲಭವಾಗಿ ವ್ಯಾಖ್ಯಾನಿಸಬಹುದು. ನಿರ್ವಹಿಸಬೇಕಾದ ಕೆಲವು ಕರ್ತವ್ಯಗಳಿಗನುಗುಣವಾಗಿ ಪ್ರತಿಯೊಂದು ಹಕ್ಕು ಪರಸ್ಪರ ಸಂಬಂಧಿಸಿರುತ್ತದೆ. "

-ಮಹಾತ್ಮ ಗಾಂಧಿ

## ಮೂಲಭೂತ ಕರ್ತವ್ಯಗಳು ಮತ್ತು ಹಕ್ಕುಗಳು ಒಂದೇ ನಾಣ್ಯದ ಎರಡು ಮುಖಗಳು

"ಕರ್ತವ್ಯದ ಮೂಲ ಹಕ್ಕು. ನಾವು ನಮ್ಮ ಕರ್ತವ್ಯಗಳನ್ನು ನಿರ್ವಹಿಸಿದರೆ, ಹಕ್ಕುಗಳನ್ನು ಪಡೆಯುವುದು ಹೆಚ್ಚು ಕಷ್ಟವಾಗುವುದಿಲ್ಲ " ಎಂದು ಮಹಾತ್ಮ ಗಾಂಧಿಯವರು ಹೇಳಿದ್ದರು.

ನಾಗರಿಕರು ತಮ್ಮ ಮೂಲಭೂತ ಹಕ್ಕುಗಳನ್ನು, ಮೂಲಭೂತ ಕರ್ತವ್ಯಗಳೊಂದಿಗೆ ಜೋಡಿಸದ ಹೊರತು ಸಮಾಜದಲ್ಲಿ ಪ್ರಜಾಪ್ರಭುತ್ವವು ಆಳವಾಗಿ ಬೇರೂರಲು ಸಾಧ್ಯವಿಲ್ಲ.

ಪ್ರತೀ ಹಕ್ಕು ತನಗನುಗುಣವಾದ ಕರ್ತವ್ಯವನ್ನು ಹೊಂದಿರುತ್ತದೆ. ಒಬ್ಬ ವ್ಯಕ್ತಿಯ ನಾಗರಿಕ ಕರ್ತವ್ಯದ ಅನುಸರಣೆ ಇತರ ವ್ಯಕ್ತಿಗಳ ಹಕ್ಕುಗಳನ್ನು ಖಾತ್ರಿಗೊಳಿಸುತ್ತದೆ.

ನಾವು ನಮ್ಮ ಕರ್ತವ್ಯಗಳನ್ನು ನಿರ್ವಹಿಸಿದಾಗ ನಮ್ಮ ಹಕ್ಕುಗಳಿಗೆ ಬಾಧ್ಯಸ್ಥರಾಗಿರುತ್ತೇವೆ.